# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 862 |
| ಸದಸ್ಯರ ಹೆಸರು | : | ಶ್ರೀ ಪಿ.ಆರ್.ರಮೇಶ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 20–12–2021 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಾರ್ವಜನಿಕ ಪಾದಚಾರಿ ಮಾರ್ಗ (Footpath) ಗಳ ಮೇಲೆ ಇಂಧನ ಇಲಾಖೆಯ ಒಟ್ಟು ಎಷ್ಟು ಟ್ರಾನ್ಸ್ ಫಾರ್ಮರ್ ಗಳು ಸ್ಥಾಪಿತಗೊಂಡು ಕಾರ್ಯನಿರ್ವಹಿಸುತ್ತಿವೆ; (ಜಿಲ್ಲಾವಾರು ವಿವರ ನೀಡುವುದು); | ರಾಜ್ಯದ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಸಾರ್ವಜನಿಕ ಪಾದಚಾರಿ ಮಾರ್ಗ (Footpath) ಗಳ ಮೇಲೆ ಒಟ್ಟು **6519** ಸಂಖ್ಯೆಯ ವಿವಿಧ ಸಾಮರ್ಥ್ಯದ ಪರಿವರ್ತಕಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ–1** ರಲ್ಲಿ ಒದಗಿಸಲಾಗಿದೆ. |
| ಆ) | ಸದರಿ ಫುಟ್‌ಪಾತ್‌ಗಳ ಮೇಲೆ ಸ್ಥಾಪಿತಗೊಂಡಿರುವ ಟ್ರಾನ್ಸ್ ಫಾರ್ಮರ್ ಗಳನ್ನು ಫುಟ್‌ಪಾತ್‌ಗಳಿಂದ ತೆರವುಗೊಳಿಸುವ ಕಾರ್ಯದ ಪ್ರಗತಿ ಏನು; (ಜಿಲ್ಲಾವಾರು ವಿವರ ನೀಡುವುದು) | ಪಾದಚಾರಿ ಮಾರ್ಗ (Footpath) ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿವರ್ತಕಗಳನ್ನು ತೆರವುಗೊಳಿಸುವ ಕಾರ್ಯದ ಪ್ರಗತಿಯ ಕಂಪನಿವಾರು ವಿವರಗಳನ್ನು **ಅನುಬಂಧ–2** ರಲ್ಲಿ ಒದಗಿಸಿದೆ. |
| ಇ) | ಕಳೆದ 5 ವರ್ಷಗಳಿಂದ ಫುಟ್‌ಪಾತ್‌ಗಳ ಮೇಲೆ ಇಲಾಖೆಯಿಂದ ಸ್ಥಾಪಿತವಾಗಿರುವ ವಿದ್ಯುತ್ ಸ್ಥಾವರಗಳ ಮತ್ತು ಇತರೆ ಉಪ ಸ್ಥಾವರಗಳಿಂದ ಸಾರ್ವಜನಿಕರಿಗೆ ಅಪಾಯಕಾರಿ ಆಗುತ್ತಿರುವ ವಿಷಯ ಕುರಿತು ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಒಟ್ಟು ದೂರುಗಳ ಸಂಖ್ಯೆ ಎಷ್ಟು; ಮತ್ತು ತೆಗೆದುಕೊಂಡ ಕ್ರಮಗಳ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಕಳೆದ 5 ವರ್ಷಗಳಿಂದ ಪಾದಚಾರಿ ಮಾರ್ಗಗಳಲ್ಲಿ ಸ್ಥಾಪಿತವಾಗಿರುವ ವಿದ್ಯುತ್ ಪರಿವರ್ತಕಗಳಿಂದ ಸಾವರ್ಜನಿಕರಿಗೆ ಅಪಾಯವಾಗುತ್ತಿರುವ ಬಗ್ಗೆ ಯಾವುದೇ ದೂರು ದಾಖಲಾಗಿರುವುದಿಲ್ಲ. |
| ಈ) | ಈ ವಿಷಯದ ಕುರಿತು ಸರ್ಕಾರದಿಂದ ಸರ್ವೆ ಕಾರ್ಯ ಕೈಗೊಳ್ಳಲಾಗಿದೆಯೇ? (ವಿವರ ನೀಡುವುದು) | |

ಸಂಖ್ಯೆ: ಎನರ್ಜಿ 283 ಇಬಿಎಸ್ 2021

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

# ಅನುಬಂಧ-1

ಪಾದಚಾರಿ ಮಾರ್ಗ (Footpath) ಗಳ ಮೇಲೆ ಕಾರ್ಯನಿರ್ವಹಿಸುತ್ತಿರುವ ಟ್ರಾನ್ಸ್ ಫಾರ್ಮರ್ ಗಳ ಜಿಲ್ಲಾವಾರು ವಿವರಗಳು:-

| ಕ್ರ.ಸಂ | ಜಿಲ್ಲೆಯ ಹೆಸರು | ಪರಿವರ್ತಕಗಳು ಸಂಖ್ಯೆ |
|---|---|---|
| | **ಬೆಸ್ಕಾಂ** | |
| 1 | ಬೆಂಗಳೂರು ನಗರ | 5739 |
| 2 | ರಾಮನಗರ | 25 |
| 3 | ಕೋಲಾರ | 06 |
| 4 | ಚಿಕ್ಕಬಳ್ಳಾಪುರ | 02 |
| 5 | ತುಮಕೂರು | 32 |
| 6 | ಚಿತ್ರದುರ್ಗ | 1 |
| | ಒಟ್ಟು | **5805** |
| | **ಮೆಸ್ಕಾಂ** | |
| 1 | ಶಿವಮೊಗ್ಗ | 48 |
| | ಒಟ್ಟು | **48** |
| | **ಸೆಸ್ಕ್:** | |
| 1 | ಮೈಸೂರು | 137 |
| 2 | ಚಾಮರಾಜನಗರ | 16 |
| 3 | ಮಡಿಕೇರಿ | 04 |
| 4 | ಮಂಡ್ಯ | 75 |
| 5 | ಹಾಸನ | 182 |
| | ಒಟ್ಟು | **414** |
| | **ಹೆಸ್ಕಾಂ** | |
| 1 | ಧಾರವಾಡ | 14 |
| 2 | ಗದಗ | 61 |
| 3 | ಬೆಳಗಾವಿ | 88 |
| 4 | ವಿಜಯಪುರ | 58 |
| 5 | ಬಾಗಲಕೋಟೆ | 31 |
| | ಒಟ್ಟು | **252** |
| | **ಜೆಸ್ಕಾಂ** | – |
| | ವಿ.ಸ.ಕಂಪನಿಗಳ ಒಟ್ಟು | **6519** |

## ಅನುಬಂಧ-2

**ಫುಟ್‌ಪಾತ್‌ಗಳ ಮೇಲೆ ಸ್ಥಾಪಿತಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು ಫುಟ್‌ಪಾತ್‌ಗಳಿಂದ ತೆರವುಗೊಳಿಸುವ ಕಾಮಗಾರಿಗಳ ಪ್ರಗತಿಯ ವಿವರಗಳು:-**

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ:-**

ಬೆಸ್ಕಾಂ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗದಲ್ಲಿ 2017 ನೇ ಸಾಲಿನಲ್ಲಿ ಗುರುತಿಸಲಾಗಿದ್ದ 6309 ಸಂಖ್ಯೆಯ ಪರಿವರ್ತಕ ಕೇಂದ್ರಗಳ ಪೈಕಿ 504 ಸಂಖ್ಯೆ ಪರಿವರ್ತಕಗಳನ್ನು ಸ್ಥಳಾಂತರಿಸಲಾಗಿದೆ ಹಾಗೂ ಉಳಿದ 5805 ಪರಿವರ್ತಕ ಕೇಂದ್ರಗಳ ಪೈಕಿ, ಸ್ಥಳಾಂತರಕ್ಕೆ ಅವಕಾಶವಿಲ್ಲದ 2330 ಸಂಖ್ಯೆಯ ಪರಿವರ್ತಕ ಕೇಂದ್ರಗಳನ್ನು ಸುರಕ್ಷತಾ ಕ್ರಮ ಅನುಸರಿಸಿ, ಹೊಸ ವಿನ್ಯಾಸಕ್ಕೆ ಬದಲಾಯಿಸಿ ಅದೇ ಸ್ಥಳದಲ್ಲಿ ಅಳವಡಿಸಲಾಗಿದೆ. ಬಾಕಿ ಉಳಿದ 3475 ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಬದಲಾಯಿಸುವ ಮತ್ತು ಸ್ಥಳಾಂತರಿಸುವ ಕಾಮಗಾರಿಗಳನ್ನು ಹಂತಹಂತವಾಗಿ ಆದ್ಯತೆ ಮೇಲೆ ಕೈಗೆತ್ತಿಕೊಳ್ಳಲಾಗುವುದು. ಜಿಲ್ಲಾವಾರು ವಿವರಗಳು ಕೆಳಕಂಡಂತಿವೆ :

| ಕ್ರ ಸಂ. | ಜಿಲ್ಲೆ | Foot path ಗಳ ಮೇಲೆ ಗುರುತಿಸಲಾಗಿದ್ದ ಪರಿವರ್ತಕ | ಸ್ಥಳಾಂತರಿಸಿದ ಪರಿವರ್ತಕ ಕೇಂದ್ರಗಳ ಸಂಖ್ಯೆ | Foot path ಗಳ ಮೇಲೆ ಕಾರ್ಯ ನಿರ್ವಹಿಸುತ್ತಿರುವ | ಹೊಸ ವಿನ್ಯಾಸಕ್ಕೆ ಬದಲಾಯಿಸಿದ ಪರಿವರ್ತಕ | ಸ್ಥಳಾಂತರಿಸಲು ಅಥವಾ ಹೊಸವಿನ್ಯಾಸಕ್ಕೆ ಬದಲಾಯಿಸಲು |
|---|---|---|---|---|---|---|
| 1 | ಬೆಂಗಳೂರು | 5741 | 2 | 5739 | 2330 | 3409 |
| 2 | ಬೆಂಗಳೂರು ಗ್ರಾಮೀಣ | 121 | 121 | 0 | 0 | 0 |
| 3 | ರಾಮನಗರ | 25 | 0 | 25 | 0 | 25 |
| 4 | ಕೋಲಾರ | 11 | 5 | 6 | 0 | 6 |
| 5 | ಚಿಕ್ಕಬಳ್ಳಾಪುರ | 5 | 3 | 2 | 0 | 2 |
| 6 | ತುಮಕೂರು | 56 | 24 | 32 | 0 | 32 |
| 7 | ದಾವಣಗೆರೆ | 305 | 305 | 0 | 0 | 0 |
| 8 | ಚಿತ್ರದುರ್ಗ | 45 | 44 | 1 | 0 | 1 |
| | **ಒಟ್ಟು ಬೆವಿಕಂ** | **6309** | **504** | **5805** | **2330** | **3475** |

**ಮಂಗಳೂರು ವಿದ್ಯುತ್ ಸರಬರಾಜು ಕಂಪನಿ:**

ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಶಿವಮೊಗ್ಗ ನಗರದ ಫುಟ್‌ಪಾತ್‌ಗಳ ಮೇಲೆ ಸ್ಥಾಪಿತಗೊಂಡಿರುವ 34 ಸಂಖ್ಯೆಯ ಪರಿವರ್ತಕಗಳನ್ನು ಶಿವಮೊಗ್ಗ ಸ್ಮಾರ್ಟ್ ಸಿಟಿ ಕಾಮಗಾರಿಯಡಿಯಲ್ಲಿ ತೆರವುಗೊಳಿಸಲಾಗುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಉಳಿದ 14 ಸಂಖ್ಯೆಯ ಪರಿವರ್ತಕಗಳನ್ನು ಸ್ಥಳಾಂತರಗೊಳಿಸಲು ಸ್ಥಳದ ಅಭಾವವಿರುವುದರಿಂದ ತೆರವುಗೊಳಿಸಿರುವುದಿಲ್ಲ.

**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ:**

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವ್ಯಾಪ್ತಿಯಲ್ಲಿ ಎಲ್ಲಾ ಸುರಕ್ಷತಾ ಮಾರ್ಗಗಳನ್ನು ಅನುಸರಿಸಿ ಪರಿವರ್ತಕಗಳನ್ನು ಪಾದಾಚಾರಿ ಮಾರ್ಗದಲ್ಲಿ ಅಳವಡಿಸಲಾಗಿದ್ದು ತೆರವುಗೊಳಿಸುವ ಯಾವುದೇ ಕಾರ್ಯ ಪ್ರಗತಿಯಲ್ಲಿರುವುದಿಲ್ಲ.

**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ:**

ಪಾದಚಾರಿ ಮಾರ್ಗಗಳ ಮೇಲೆ ಅಳವಡಿಸಿರುವ ಪರಿವರ್ತಕಗಳನ್ನು ತೆರವುಗೊಳಿಸಲು ತೆಗೆದುಕೊಂಡ ಕ್ರಮಗಳ ವಿವರ:

ಧಾರವಾಡ ಜಿಲ್ಲೆಯಲ್ಲಿನ ಪಾದಚಾರಿ ಮಾರ್ಗಗಳಲ್ಲಿ ಸ್ಥಾಪಿತಗೊಂಡಿರುವ 04 ಸಂಖ್ಯೆಯ ಪರಿವರ್ತಕಗಳನ್ನು ಕೆಪೆಕ್ಸ್ ಯೋಜನೆಯಡಿ, 01 ಸಂಖ್ಯೆಯ ಪರಿವರ್ತಕವನ್ನು ಆರ್.ಡಿ.ಎಸ್.ಎಸ್ ಯೋಜನೆಯಡಿ, ಸ್ಥಳಾಂತರಿಸುವ ಕ್ರಮ ಕೈಗೊಳ್ಳಲಾಗುವುದು ಹಾಗೂ 09 ಸಂಖ್ಯೆಯ ಪರಿವರ್ತಕಗಳನ್ನು ತೆರವುಗೊಳಿಸಲು ಸ್ಥಳಾವಕಾಶ ಇಲ್ಲದೇ ಇರುವುದರಿಂದ ಪಾದಚಾರಿಗಳಿಗೆ ತೊಂದರೆಯಾಗದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಗದಗ ಜಿಲ್ಲೆಯಲ್ಲಿನ ಪಾದಚಾರಿ ಮಾರ್ಗಗಳಲ್ಲಿ ಸ್ಥಾಪಿತಗೊಂಡಿರುವ 61 ಸಂಖ್ಯೆಯ ಟ್ರಾನ್ಸ್ ಫಾರ್ಮರ್‌ಗಳನ್ನು ಬಂಡವಾಳ ಕಾಮಗಾರಿಗಳ ಪಿ.ಎಮ್.ಅರ್.ಎ (Preventing measures to Reduce Electrical Accidents) ಯೋಜನೆ ಅಡಿಯಲ್ಲಿ ಸ್ಥಳಾಂತರಿಸುವ ಕ್ರಮ ಶೀಘ್ರ ಕೈಗೊಳ್ಳಲಾಗುವುದು.

ಬೆಳಗಾವಿ ಜಿಲ್ಲೆಯ ಪಾದಚಾರಿ ಮಾರ್ಗಗಳಲ್ಲಿ ಸ್ಥಾಪಿತಗೊಂಡಿರುವ 50 ಸಂಖ್ಯೆಯ ಪರಿವರ್ತಕಗಳನ್ನು ಸ್ಮಾರ್ಟ ಸಿಟಿ ಯೋಜನೆಯಡಿ ತೆರವುಗೊಳಿಸಲಾಗುತ್ತಿದೆ ಮತ್ತು 38 ಸಂಖ್ಯೆಯ ಪರಿವರ್ತಕಗಳಿಗೆ ಸ್ಪನ್ ಪೋಲ್ (spun pole) ಅಳವಡಿಸಲಾಗಿದೆ.

ವಿಜಯಪುರ ಜಿಲ್ಲೆಯಲ್ಲಿನ ಪಾದಚಾರಿ ಮಾರ್ಗಗಳಲ್ಲಿ ಸ್ಥಾಪಿತಗೊಂಡಿರುವ ಟ್ರಾನ್ಸಫಾರ್ಮರಗಳನ್ನು ಗುರುತಿಸಿ ಪಿ ಎಮ್ ಅರ್ ಎ ಯೊಜನೆ ಅಡಿಯಲ್ಲಿ ತೆರುವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬಾಗಲಕೋಟೆ ಜಿಲ್ಲೆಯಲ್ಲಿನ ಪಾದಚಾರಿ ಮಾರ್ಗದಲ್ಲಿರುವ ಪರಿವರ್ತಕಗಳನ್ನು ತೆರವುಗೊಳಿಸಲು ಸ್ಥಳಾವಕಾಶದ ಕೊರತೆಯಿರುವದರಿಂದ ಪಾದಚಾರಿಗಳಿಗೆ ತೊಂದರೆಯಾಗದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸ್ಥಳಾವಕಾಶ ಇರುವ ಕಡೆಗೆ ಪಿ.ಎಮ್.ಅರ್.ಎ ಯೊಜನೆ ಅಡಿಯಲ್ಲಿ ತೆರುವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.